(ನ) ರಾಯಚೂರು ಉಪವಿಭಾಗದ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಸ್ಥಗಿತ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ರಾಯಚೂರು ಉಪ ವಿಭಾಗದ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸಗಳನ್ನು ಮಾಡದೇ, ಸುಮಾರು 10 ಕೋಟಿ ರೂಪಾಯಿಗಳನ್ನು ಡೂಪ್ಲಿಕೇಟ್ ಬಿಲ್ಲುಗಳನ್ನು ನೀಡಿ ಕೆಲಸವನ್ನು ಮಾಡದೇ ಬಿಲ್ಲ್‌ಗಳನ್ನು ಪಾವತಿ ಮಾಡಿ ಸುಮಾರು 10 ಕೋಟಿ ರೂಪಾಯಿಗಳನ್ನು ತಿಂದಹಾಕಿದ್ದಾರೆ. ಡಾಂಬರೀಕರಣ ಮಾಡುವುದರಲ್ಲಿ, ಸಿಮೆಂಟ್‌ನ್ನು ಕೊಂಡುಕೊಳ್ಳುವುದರಲ್ಲಿ, ಹಾಗೂ ಕಬ್ಬಿಣವನ್ನು ಖರೀದಿ ಮಾಡುವುದರಲ್ಲಿ, ಈ ರೀತಿಯಾದ ಐಟಮ್‌ವಾರು 10 ಕೋಟಿ ರೂಪಾಯಿಗಳನ್ನು ಆ ಡೂಪ್ಲಿಕೇಟ್ ಬಿಲ್‌ಗಳನ್ನು ನೀಡಿ ಕೆಲಸವನ್ನು ಮಾಡದೇ ಅವರು ಹಣವನ್ನು ತಿಂದು ಹಾಕಿದ್ದಾರೆ. ಆ ರೀತಿಯಲ್ಲಿ ಡಾಂಬರೀಕರಣವಾಗದೆ ಇರತಕ್ಕಂಥ 750 ರಿಂದ 900 ರೂಪಾಯಿಗಳನ್ನು ರೇಟ್ ಫಿಕ್ಸ್ ಮಾಡಿ ಬಿಲ್‌ಗಳನ್ನು ತೆಗೆದುಕೊಂಡಿದ್ದು. ಪಾಕೇಟ್ ಬ್ಯಾರೆಲ್‌ಗಳ ಮುಖಾಂತರ ಡಾಂಬರೀಕರಣ ಮಾಡತಕ್ಕಂಥ ಸಂದರ್ಭದಲ್ಲಿ, ನಾನು ಉದಾಹರಣೆಯಾಗಿ ಹೇಳುತ್ತೇನೆ: ಸೀಮೆಂಟ್ ಹಾಗೂ ಸ್ಟೀಲ್ ಪರ್ಚೇಸ್ ಮಾಡತಕ್ಕಂಥಾದ್ದರಲ್ಲಿ ಬಿಲ್‌ಗಳನ್ನು ಪ್ರೊಡ್ಯೂಸ್ ಮಾಡಿ ಹಣವನ್ನು ತಂದು ಹಾಕಿದ್ದಾರೆ. ಜೆ.ಇ, ಎ.ಇಗಳು ಕಬ್ಬಿಣವನ್ನು ಮಾರ್ಕೆಟ್ಟಿಗಿಂತ ಹೆಚ್ಚು ಹಣವನ್ನು ಕೊಟ್ಟು ಕಬ್ಬಿಣವನ್ನು ಪರ್ಚೇಸ್ ಮಾಡಿದ್ದೇವೆಂದು ಹೇಳಿ ಸುಳ್ಳು ಬಿಲ್‌ಗಳನ್ನು ಸೃಷ್ಟಿ ಮಾಡಿರತಕ್ಕಂಥದ್ದು, ಈ ರೀತಿಯಾಗಿ ಹಲವಾರು ರೀತಿಯಲ್ಲಿ ಬಿಲ್ಲುಗಳನ್ನು ಮಾಡಿದ್ದಾರೆ. ಅದನ್ನು ಪರಿಶೀಲನೆ ಮಾಡಿದಾಗ ಗೊತ್ತಗುತ್ತದೆ. ರಾಯಚೂರು ಉಪವಿಭಾಗದ ಯಾರೋ ಒಬ್ಬ ಇ.ಇ. ಅವರ ಹೆಸರು ಹೇಳುವುದು ಬೇಡ, ಹೆಸರು ಹೇಳಿದರೆ ಅದು ಸಮಸ್ಯೆಯಾಗುತ್ತದೆ. ಆ ಒಬ್ಬ ಅಧಿಕಾರಿ 4 ರಿಂದ 5 ಕೋಟಿ ರೂಪಾಯಿಗಳ ಬ್ಯಾಕ್ ಬಿಲ್ಸ್‌ಗಳನ್ನು ನೀಡಿ ಹಣವನ್ನು ಡ್ರಾ ಮಾಡಿದ್ದಾರೆ. ಇನ್ನೊಬ್ಬ ಎ.ಇ, ಹಾಗೂ ಇ.ಇ. ಮೂರು ಕೋಟಿ ರೂಪಾಯಿಗಳನ್ನು ಹಣವನ್ನು ಮತ್ತು ಎ.ಇ.ಇ. 10 ಜನ ಇವರೆಲ್ಲರೂ ಒಟ್ಟಿಗೆ ಕೂಡಿಕೊಂಡು 10 ಕೋಟಿ ರೂಪಾಯಿಗಳ ಹಣವನ್ನು ತೆಗೆದುಕೊಂಡಿರುತ್ತಾರೆ. ಇದರ ಪರಿಣಾಮ ಏನಾಗಿದೆ? ಯಾವ ಕಾಮಗಾರಿಗಾಗಿ ಆ ಹಣವನ್ನು ಡ್ರಾ ಮಾಡಿದ್ದಾರೆ? ಕಾಮಗಾರಿಯ ಕೆಲಸವಾಗಿಲ್ಲ, ಉದಾಹರಣೆಗೆ ಹೇಳಬೇಕೆಂದರೆ: ರಸ್ತೆ ಮಾಡುತ್ತೇವೆ, ಸೇತುವೆ ಮಾಡುತ್ತೇವೆಂದು ಹೇಳಿ ಯಾವ ರೀತಿ ರಸ್ತೆಗಳೂ ಆಗಿಲ್ಲ ಯಾವ ಸೇತುವೆಗಳೂ ಆಗಿಲ್ಲ. ಈ ರೀತಿಯಾಗಿ ಅವ್ಯವಹಾರ ಮಾಡಿ ಯಾವುದನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಉಪಯೋಗಿಸಬೇಕಾಗಿತ್ತು ಈ ಹಣವನ್ನು ಸಂಪೂರ್ಣವಾಗಿ ಸುಳ್ಳು ಲೆಕ್ಕಗಳನ್ನು ಹಾಗೂ ಸುಳ್ಳು ಬಿಲ್‌ಗಳನ್ನು ಮಾಡಿ ಹಣವನ್ನು ಡ್ರಾ ಮಾಡಿರುತ್ತಾರೆ. ಇದರ ಬಗ್ಗೆ ಸರ್ಕಾರಕ್ಕೆ ಸಾರ್ವಜನಿಕರೆಲ್ಲರೂ ಮನವಿಯನ್ನು ಮಾಡಿರುತ್ತಾರೆ.

ಅಧ್ಯಕ್ಷರು :— ನಿಮ್ಮ ಹತ್ತಿರ ಡಾಕುಮೆಂಟರಿ ಎವಿಡೆನ್ಸ್ ಏನು ಇದೆ? ನಿಮ್ಮ ಸ್ಟೇಟ್‌ಮೆಂಟಿಗೆ ಬೇಸಿಸ್ ಏನು?..

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಸಧ್ಯಕ್ಕೆ ನನ್ನ ಹತ್ತಿರ ಯಾವ ಸಾಕ್ಷಿ ಇಲ್ಲ.

ಅಧ್ಯಕ್ಷರು :— ನಿಮ್ಮ ಹತ್ತಿರ ಸಾಕ್ಷಿ ಪುರಾವೆ ಇಲ್ಲ. ಇದು ನಾಳೆ ಪತ್ರಿಕೆಯಲ್ಲಿ ಬಂದರೆ. ಸಾಕ್ಷಿ ಪುರಾವೆ ಇಲ್ಲದೆ ಮಾತನಾಡಿದರೆ ಹೇಗೆ? ಶ್ರೀ ಮಾಟಾಳ್ ನಾಗರಾಜ್‌ರವರೇ, ನೀವಾದರೂ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಮ್ಮ ಹತ್ತಿರ ಸಾಕ್ಷಿ ಪುರಾವೆಗಳು ಇದ್ದರೆ ನಾವು ಅಲ್ಲಿ ಕ್ರಿಮಿನಲ್ ಕೇಸನ್ನು ಬುಕ್ ಮಾಡಲು ಹೇಳುತ್ತಿದ್ದೆವು.

ಅಧ್ಯಕ್ಷರು :— ನೀವು ಕೊಡುವ ಹೇಳಿಕೆಗೆ ಬೇಸಿಸ್ ಏನು? ಮಾನ್ಯ ಈಶ್ವರಪ್ಪನವರು ಮಾತನಾಡುವ ವೇಳೆಗೆ ನಾನು ಕೇಳಿದೆ. ಬರೀ ನ್ಯೂಸ್ ಪೇಪರ್‌ನ ಮೇಲೆ ನಾವು ಅವಲಂಬಿಸಬಾರದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನು ನ್ಯೂಸ್ ಪೇಪರನ ಆಧಾರದ ಮೇಲೆ ಹೇಳುತ್ತಿಲ್ಲ.

ಅಧ್ಯಕ್ಷರು :— ಮಾನ್ಯ ಶ್ರೀರಾಮರೆಡ್ಡಿಯವರೇ, ನಾನು ಹೇಳುವುದನ್ನು ಕೇಳಿ. ಒಬ್ಬರಿಗೊಂದು ನೀತಿ ಮತ್ತೊಬ್ಬರಿಗೆ ಒಂದು ನೀತಿಯನ್ನು ಅನುಸರಿಸುವುದಕ್ಕೆ ಆಗುವುದಿಲ್ಲವೆಂದು ಹೇಳಿದೆ. ಮಾನ್ಯ ಈಶ್ವರಪ್ಪನವರು ತಕ್ಷಣ ಅದನ್ನು ಉಲ್ಲೇಖ ಮಾಡಿ ತಮ್ಮ ಹತ್ತಿರ ಇರುವ ಮಾಹಿತಿಯನ್ನು ಸಭೆಗೆ ಹೇಳಿದರು. ನಿಮ್ಮ ಹತ್ತಿರ ಏನಾದರೂ ಆಧಾರವಿದೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನು ನಿನ್ನೆ ದಿನ ಹಾಫ್‌ಕಾಮ್ಸ್ ಬಗ್ಗೆ ಪ್ರಸ್ತಾಪ ಮಾಡಿದೆ. ಅದರ ಬಗ್ಗೆ ನನ್ನ ಹತ್ತಿರ ಏನೂ ಆಧಾರವಿರಲಿಲ್ಲ. ನನಗೆ ಗೊತ್ತಿರುವಂತಹ ಮಾಹಿತಿಯನ್ನು ನಾನು ಹೇಳಿದೆ. ನಾನು ಹೇಳುವ ಮಾಹಿತಿಯು ಸರಿಯಿದ್ದರೆ ತನಿಖೆಯನ್ನು ಮಾಡಲಿ ಇಲ್ಲದಿದ್ದರೆ ಬೇಡ.

ಅಧ್ಯಕ್ಷರು :— ಮಾನ್ಯ ಪ್ರಕಾಶ್‌ರವರೇ, ನನ್ನ ಕಷ್ಟವೇನೆಂದರೆ, ನಿಮ್ಮ ಪಿಡಬ್ಲ್ಯೂಡಿ ಮಿನಿಸ್ಟರ್ ಕುಳಿತಿದ್ದಾರೆ. ನೀವು ಏನನ್ನೂ ಹೇಳುವುದಿಲ್ಲ. ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡುವುದಿಲ್ಲ. ಅಬ್ಜೆಕ್ಟ್ ಮಾಡುವುದಿಲ್ಲ, ಇಲ್ಲಿವೆಲ್ಲಾ ಕೆಲಸವನ್ನು ನಾನೇ ಮಾಡಬೇಕಾಗುತ್ತದೆ. Sometimes it becomes difficult for me. Everything goes into record. ನೀವು ಟ್ರಜರಿ ಬೆಂಚ್ಸ್‌ನವರು ಅಲರ್ಟ್ ಆಗಿರಬೇಕು. He keeps on. telling what is the basis for him?.. I should not allow these things.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಅಧ್ಯಕ್ಷರೇ, ವಂದನೆಗಳು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ನೀವು ಎಲ್ಲಾ ಅವರಿಗೆ ಹೇಳಿಕೊಟ್ಟರೆ ಹೇಗೆ?

ಅಧ್ಯಕ್ಷರು :— ಏನು ಮಾಡೋಣ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ಅವರಿಗೆ ಪಾಯಿಂಟ್ ರೈಸ್ ಮಾಡಿ, ಪ್ರೊಟೆಸ್ಟ್ ಮಾಡಿ ಎಂದು ಹೇಳಿಕೊಟ್ಟರೆ ಹೇಗೆ?

ಅಧ್ಯಕ್ಷರು :— ಅವರಿಗೆ ಹೇಳಿಕೊಟ್ಟರೂ ಮಾಡುವುದಿಲ್ಲವಲ್ಲಾ. ನಾನು ಎಲ್ಲಿಗೆ ಹೋಗಲಿ. Mr. Ghorpade is laughing at my plight.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಶ್ರೀರಾಮರೆಡ್ಡಿಯವರು ಅವರ ಹತ್ತಿರ ಮಾಹಿತಿಯ ಪ್ರಕಾರ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಈ ಮಾಹಿತಿಯು ಸರಿಯಾಗಿಲ್ಲವೆಂದು ಅವರು ಹೇಳಲಿ, ಇಲ್ಲದಿದ್ದರೆ ನಾನು ಎನ್‌ಕ್ವೈರಿ ಮಾಡಿಸುತ್ತೇನೆಂದಾದರೂ ಹೇಳಲಿ.

ಅಧ್ಯಕ್ಷರು :— ಅವರ ಹತ್ತಿರ ಏನಾದರೂ ಮಾಹಿತಿ ಇರಲಿ ಬಿಡಿ. ನಾನು ನಿಮ್ಮ ಸಮರ್ಥನೆಯನ್ನು ಒಪ್ಪಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಹೇಳಬೇಕಾದರೆ ಯಾವ ಆಧಾರಗಳೆಂದರೆ ಇಲ್ಲಿ ಒಂದು ಪತ್ರಿಕೆ. ನಾನು ಪತ್ರಿಕೆಯ ಆಧಾರದ ಮೇಲೆ ಹೇಳಬೇಕು. ನಮಗೆ ಇರತಕ್ಕಂಥದ್ದು ಪತ್ರಿಕೆಯೇ ಒಂದು ಆಧಾರ. ಸರ್ಕಾರಕ್ಕೆ ಇರತಕ್ಕಂಥದ್ದು ಸರ್ಕಾರಿ ವ್ಯವಸ್ಥೆಗಳು ಬೇಕಾದಷ್ಟಿದೆ. ಆದರೆ ಇತ್ತೀಚೆಗೆ ಸರ್ಕಾರದವರು ಆಪ್ತ ಸಹಾಯಕರು ಎಂದು ಮಾಡಿದ್ದೀರಿ. ಅವರು ಕಛೇರಿಗೆ 3 ತಿಂಗಳು ಬಂದರೆ 6 ತಿಂಗಳು ಬರುವುದಿಲ್ಲ, 6 ತಿಂಗಳು ಬಂದರೆ 12 ತಿಂಗಳು ಬರುವುದಿಲ್ಲ. ನಾವು ಇವರನ್ನು ಇಟ್ಟುಕೊಂಡು ನಾವು ಏನು ಮಾಡೋಣ?

ಅಧ್ಯಕ್ಷರು :— ಏನಾದರೂ ಸ್ವಲ್ಪ ಮಾಹಿತಿ ಇರಬೇಕಲ್ಲವೇ ಎಂದು ನಾನು ಹೇಳುತ್ತಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನು ವಿವರಗಳನ್ನು ಹೇಳುವುದಕ್ಕೆ ಇನ್ನು ಹೋಗಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅವರಿಗೆ ಅಲ್ಲಿರತಕ್ಕಂಥವರು ಪತ್ರ ಬರೆದಿರುತ್ತಾರೆ. ಆದ್ದರಿಂದ ಹೇಳುತ್ತಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅದರ ಬಗ್ಗೆ ತನಿಖೆ ಮಾಡಿ ಕ್ರಮವನ್ನು ತೆಗೆದುಕೊಳ್ಳಿ. ಏನೂ ಆಗಿಲ್ಲವೆಂದರೆ ಏನೂ ಆಗಿಲ್ಲವೆಂದು ಹೇಳಬೇಕಲ್ಲವೇ. ತಾವು ಪ್ರಸ್ತಾಪ ಮಾಡುವುದಕ್ಕೆ ಏನಾದರೂ ಆಧಾರವಿದೆಯೆಂದರೆ ನಮ್ಮ ಹತ್ತಿರ ಇರುವ ಮಾಹಿತಿಯಷ್ಟೆ ಆಧಾರ.

ಅಧ್ಯಕ್ಷರು :— ನೀವು ನನ್ನ ಎಕ್ಸ್‌ಪೆಕ್ಟೇಷನ್‌ಗೆ ಬರಲಿಲ್ಲ. ನಾನು ನಿಮ್ಮನ್ನು ಕ್ವೊಶ್ಚನ್ ಮಾಡುವ ಉದ್ದೇಶವೆಂದರೆ ಇನ್ನು concretise ಮಾಡಿ substantiate ಮಾಡಿ ಹೇಳುವುದಿದ್ದರೆ ಹೇಳಲಿ ಎಂದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನೋಡಿ ನೀವು ಈಗ ಈ ರೀತಿ ಹೇಳುತ್ತಿದ್ದೀರಿ.

ಅಧ್ಯಕ್ಷರು :— ಹೌದು, that is the parliamentary procedure. you must have that skill. ನೀವು ಎಂಫ್ಯಾಟಿಕ್ ಆಗಿ ಇರಬೇಕು. ಅವರು ಅಲರ್ಟ್ ಆಗಿರಬೇಕು. That is what I say.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನು ವಿವರಗಳನ್ನು ಹೇಳುವುದಕ್ಕೆ ಹೋದಾಗ ತಾವು ಮಧ್ಯೆ ಪ್ರವೇಶ ಮಾಡಿದ್ದಿರಿ. ಅದಕ್ಕೆ ನಾನು ಏನು ಮಾಡುವುದಕ್ಕಾಗುತ್ತದೆ? ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಟಾರನ್ನು ಪರ್ಚೇಸ್ ಮಾಡುವುದರಲ್ಲಿ ಒಂದೊಂದು ಬ್ಯಾರೆಲ್‌ಗೆ 750 ರಿಂದ 900 ರವರೆಗೆ ರೇಟ್‌ನ್ನು ಫಿಕ್ಸ್ ಮಾಡಿ ತೆಗೆದುಕೊಂಡಿದ್ದಾರೆ. ಆದರೆ ಅಕ್ಚ್ಯುಯಲ್‌ಆಗಿ ಮಾರ್ಕೇಟ್ ರೇಟ್‌ನಲ್ಲಿ ಆ ರೀತಿಯಿಲ್ಲ. ಎರಡನೆಯದಾಗಿ ಅವರು ಪರ್ಚೇಸ್ ಮಾಡಿರುವಂತಹ ಟಾರ್‌ನ ಬಗ್ಗೆ ಅವರು ಎಲ್ಲಿ ಹಾಕಿದ್ದಾರೆ, ಎಲ್ಲಿಗೆ ತೆಗೆದುಕೊಂಡು ಹೋಗಿರುವ ಬಗ್ಗೆ ದಾಖಲೇ ಇಲ್ಲ. ಈ ರೀತಿಯಾಗಿ ಸುಮಾರು 2 ಕೋಟಿ ರೂಪಾಯಿಗಳ ಟಾರನ್ನು ಪರ್ಚೇಸ್ ಮಾಡಿದ್ದಾರೆಂದು ಬಿಲ್ಲು ಮಾಡಿದ್ದಾರೆ. ಮೂರನೆಯದಾಗಿ ಸೀಮೆಂಟ್‌ನ ಬಗ್ಗೆ ಹೇಳುವುದಾದರೆ ಒಂದು ಚೀಲ ಸಿಮೆಂಟ್‌ಗೆ 100 ರೂಪಾಯಿಗಳು ಮಾರ್ಕೇಟ್‌ನಲ್ಲಿದ್ದರೆ 150 ರೂಪಾಯಿಗಳೆಂದು ಸುಮಾರು 3 ಕೋಟಿ ರೂಪಾಯಿಗಳ ಬಿಲ್ಲುಗಳನ್ನು ತಯಾರು ಮಾಡಿದ್ದಾರೆ. ಇದನ್ನು ಯಾರ್ಯಾರು ಮಾಡಿದ್ದಾರೆಂದರೆ ಸೆಕ್ಷನ್ ಆಫೀಸ್‌ನಲ್ಲಿರತಕ್ಕಂತಹ ಸ್ಟೋರ್‌ಕೀಪರ್‌ನಿಂದ ಹಿಡಿದು ಎಲ್ಲರೂ ಕೂಡ ರೀಕನ್‌ಸ್ಟ್ರಕ್ಷನ್ ಎಂದು ಬಿಲ್ಲುಗಳನ್ನು ಮಾಡಿದ್ದಾರೆ. ಕನ್‌ಸ್ಟ್ರಕ್ಷನ್‌ಗೆ ಅಲ್ಲ. ರೀಕನ್‌ಸ್ಟ್ರಕ್ಷನ್ ಆಫ್ ದಿ ಬಿಲ್ಡಿಂಗ್ ಅಂಡ್ ರೀಕನ್ಸ್ಟ್ರಕ್ಷನ್ ಆಫ್ ದಿ ಬ್ರಿಡ್ಜ್, ಎಂದು ಹೇಳತಕ್ಕಂಥದಕ್ಕೆ ಮಾಡಿದ್ದಾರೆ. ಇನ್ನು ಮೂರನೆಯದಾಗಿ ಸ್ಟೀಲ್‌ನ ಬಗ್ಗೆ ಹೇಳುವುದಾದರೆ, ಸ್ಟೀಲ್‌ನ್ನು ಯಾವ ರೀತಿ ಮಾಡಿದ್ದಾರೆಂದರೆ ಒಂದು ಟನ್‌ಗೆ 100 ರಿಂದ 1100 ರವರೆಗೆ ಬಿಲ್ಲುಗಳನ್ನು ಮಾಡಿದ್ದಾರೆ. ಮಾರ್ಕೆಟ್ ರೇಟ್ ಎಷ್ಟು ಎಂದು ಅವರು ಕೋಟ್ ಮಾಡಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :— ತಾವು ಎಲ್ಲಾ ವಿವರಗಳನ್ನು ಕೊಡಿ, ಖಂಡಿತವಾಗಿ ತನಿಖೆ ಮಾಡಿಸಿ ಅದಕ್ಕೆ ಉತ್ತರವನ್ನು ಕೊಡುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನು ವಿವರಗಳನ್ನು ತಮಗೆ ಕೊಡುತ್ತೇನೆ. ಈ ರೀತಿ ಐಟಂಗಳಲ್ಲಿ ಒಂದೊಂದು ಡಿವಿಷನ್‌ಗಳಲ್ಲಿ 9 ಜನ ಎ.ಇ.ಇ.ಗಳು. ಇಬ್ಬರು ಇ.ಇ.ಗಳು ಇವರೆಲ್ಲ ಸೇರಿ ಇಷ್ಟೊಂದು ಹಣವನ್ನು ಅವ್ಯವಹಾರ ಮಾಡಿದ್ದಾರೆ.

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ್ದರ ಬಗ್ಗೆ ವರದಿಯನ್ನು ತರಿಸುತ್ತೇನೆ. ಅಂಥದ್ದೇನಾದರೂ ಅವ್ಯವಹಾರಗಳಾಗಿದ್ದರೆ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಅಧ್ಯಕ್ಷರ ಮೂಲಕ ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ನನಗೆ ಕೊಡಿ ಇದರಲ್ಲಿ ಯಾವುದೇ ಅಧಿಕಾರಿಗಳು ಶಾಮೀಲಾಗಿದ್ದರೂ ಸಹ ನಾನು ಅವರನ್ನು ಬಿಡುವುದಿಲ್ಲ. ನಾನು ವರದಿಯನ್ನು ತರಿಸಿ, ತನಿಖೆಯನ್ನು ಮಾಡಿ, ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ವರದಿಯನ್ನು ತರಿಸುತ್ತೀರೋ ಅಥವಾ ತನಿಖೆಯನ್ನು ಮಾಡಿಸುತ್ತೀರೋ ಯಾವಾಗ ತನಿಖೆಯನ್ನು ಮಾಡಿಸುತ್ತೀರಾ?

ಶ್ರೀ ಉಮೇಶ್ ವಿ. ಕತ್ತಿ :— 2-3 ದಿವಸದಲ್ಲಿ ವರದಿಯನ್ನು ತರಿಸುತ್ತೇನೆ. ಅದರಲ್ಲಿ ಅವ್ಯವಹಾರವಾಗಿದೆ ಎಂದು ಕಂಡುಬಂದರೆ ಅಂತಹ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ವರದಿಯನ್ನು ತರಿಸುವ ಬಗ್ಗೆ ಇಲ್ಲಿ ಒಂದು ಸ್ಟೇಟ್‌ಮೆಂಟ್‌ನ್ನು ಕೊಡಿ.

ಶ್ರೀ ಉಮೇಶ್ ವಿ. ಕತ್ತಿ :— ವರದಿಯನ್ನು ಮಂಗಳವಾರದೊಳಗಾಗಿ ತರಿಸುವಂತಹ ವ್ಯವಸ್ಥೆಯನ್ನು ಮಾಡಿಸುತ್ತೇನೆ.

ಅಧ್ಯಕ್ಷರು :— ಡಾ: ಎಂ.ಪಿ. ಕರ್ಕಿಯವರೇ, ನಾನು ತಮಗೆ ನಾಳೆ ಉತ್ತರವನ್ನು ತರಿಸಿಕೊಡುತ್ತೇನೆ.

(ಪ) ಚಾಮರಾಜನಗರ ಪೂಣಜನೂರು ರಸ್ತೆ ದುರಸ್ತಿ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಅಧ್ಯಕ್ಷರೆ, ನಾನು ಬಹಳ ದಿನಗಳಿಂದ ಚಾಮರಾಜನಗರ - ಪೂಣಜನೂರು ರಸ್ತೆಯ ಬಗ್ಗೆ ಸುಮಾರು ಒಂದೂವರೆ ವರ್ಷದಿಂದ ಹೋರಾಟ ಮಾಡುತ್ತಾ ಬಂದಿದ್ದೇನೆ. ಇದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳಿಗೂ ಸಹ ಗೊತ್ತು. ತಾವೂ ಸಹ ಒಂದು ಸಮಾರಂಭಕ್ಕೆ ಬಂದು ಈ ರಸ್ತೆ ಇಷ್ಟೊಂದು ಹದಗೆಟ್ಟಿದೆ ಎಂದು ನೀವು ಮಾತನಾಡಿದ್ದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಬಗ್ಗೆ ಒಂದೂವರೆ ವರ್ಷದಿಂದ ಸಂಬಂಧಪಟ್ಟ ಹಿಂದಿನ ಲೋಕೋಪಯೋಗಿ